**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್,**
**ಬಸವನ ಬಾಗೇವಾಡಿ.**

ಸಿಸಿ ನಂಃ 611/2016

ಸಿ.ಡಬ್ಲ್ಯೂ 5 ಪಿ.ಡಬ್ಲ್ಯೂ 04

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ ಮೋಕಾಶಿ ಯಾನೆ ಹದ್ಲಿ |
| ತಂದೆ ಹೆಸರು | ಚಂದಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕಿರಿಶ್ಯಾಳ |

**ಸಾಕ್ಷಿಯನ್ನು ಇಂದು ದಿನಾಂಕಃ 25.07.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ಚಾಸಾ-1 ಮತ್ತು 4 ರವರು ಪರಿಚಯ ಇರುತ್ತಾರೆ. ಚಾಸಾ-7 ರಿಂದ 9 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ರವರೊಂದಿಗೆ ಗಲಾಟೆ ಮಾಡಿರುವುದಿಲ್ಲ, ಚಾಸಾ-1 ರವರನ್ನು ತಡೆದು ನಿಲ್ಲಿಸಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೇದರಿಕೆ ಹಾಕಿರುವುದಿಲ್ಲ. ಅದೇ ರೀತಿಯಾಗಿ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಮತ್ತು ಯಾವುದೇ ವಸ್ತುವಿನಿಂದ ಹಲ್ಲೇ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ನಾನು ಪೋಲಿಸರು ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ**

1. ಆರೋಪಿತರು ಮತ್ತು ಚಾಸಾ-1 ರವರು ಅಣ್ಣತಮ್ಮಂದಿರು ಇದ್ದು, ಅವರುಗಳ ಕುಟುಂಬದಲ್ಲಿ ಸುಮಾರು 1 ವರ್ಷಗಳ ಹಿಂದೆ ಹಿರಿಯರ ಸಮಕ್ಷಮದಲ್ಲಿ ಆಸ್ತಿಗಳನ್ನು ಪಾಲು ಮಾಡಿಕೊಂಡು ಬೇರೆ ಬೇರೆ ಆಗಿದ್ದು, ಮತ್ತು 3 ನೇ ಆರೋಪಿಯು ಕಿರಶ್ಯಾಳ ಗ್ರಾಮದಲ್ಲಿರುವ ಹೊಸ ಮನೆಯಲ್ಲಿ ಇದ್ದಿದ್ದಕ್ಕೆ ರೂ.12 ಲಕ್ಷ ಕೊಡಬೇಕು ಅಂತ ಹಿರಿಯರ ಸಮಕ್ಷಮದಲ್ಲಿ ಮಾತು ಕತೆ ಮಾಡಿದ್ದು, ಅದಕ್ಕೆ ಆರೋಪಿತರು ಯಾವುದೇ ಹಣವನ್ನು ಕೊಡುವುದಿಲ್ಲ ಮತ್ತು ಸರಿಯಾಗಿ ಪಾಲು ಆಗಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ 29.03.2016 ರಂದು ಸಂಜೆ 05.00 ಗಂಟೆಗೆ ಹಣ ಕೊಡುತ್ತೇನೆ ಎಂದು 3 ನೇ ಆರೋಪಿಯು ಚಾಸಾ-1 ರವರನ್ನು ಎನ್ ಎಚ್-50 ರಸ್ತೆಯ ಬ.ಬಾಗೇವಾಡಿ ಕ್ರಾಸ್ ಹತ್ತಿರ ಕರೆಸಿದ್ದರು ಎಂದರೆ ಸರಿಯಲ್ಲ.

2. ನಂತರ ಹಿರಿಯರ ಸಮಕ್ಷಮದಲ್ಲಿ ಮಾತನಾಡುತ್ತಿದ್ದಾಗ 3 ನೇ ಆರೋಪಿಯು ತನ್ನ ಮೋಟಾರ್ ಸೈಕಲ್ ನಂ. ಕೆಎ/28/ಇ.ಇ.7357 ನೇದ್ದರಿಂದ ಚಾಸಾ-1 ರವರಿಗೆ ಹಾಯಿಸಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಬಡಿಗೆಯಿಂದ ಮತ್ತು 3 ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರಿಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ-4,6 ರಿಂದ 9 ರವರು ಸೇರಿ ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಜೀವ ಬೇದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

3. ಈ ಕುರಿತು ಚಾಸಾ-1 ರವರು ಆರೋಪಿತರ ವಿರುದ್ದ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

4. ನಾನು ದಿಃ 31.03.2016 ರಂದು ಈ ಘಟನೆಯ ಕುರಿತು ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ನಿಪಿ-6 ರಲ್ಲಿ ಬರೆದಿರುವ ಅಂಶಗಳು ಗೊತ್ತಿದ್ದರೂ ಕೂಡಾ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**